ಹಾವೇರಿ ಜಿಲ್ಲೆಯ ರಟ್ಟೀಹಳ್ಳಿ ಎಂಬ ಪುಟ್ಟ ಊರನ್ನು ತಮ್ಮ ಹೆಸರಿನೊಂದಿಗೂ ತಳಕು ಹಾಕಿಕೊಂಡಿರುವ ರಾಘವಾಂಕುರ ಸಾಹಿತ್ಯದೊಂದಿಗೆ ಫೋಟೋಗ್ರಫಿ, ಗ್ರಾಫಿಕ್ ಡಿಸೈನ್‌ನಲ್ಲೂ ಆಸಕ್ತರು. 'ಪ್ಲಾಟ್ ಫಾರಂ ನಂ 3' (ಕಿರುಕಾದಂಬರಿ) 'ಹಿಂಗಂದ್ರ ಹ್ಯಾಂಗ?' (ಕವನ ಸಂಕಲನ) ಅವರ ಪ್ರಕಟಿತ ಕೃತಿಗಳು. ಪ್ರಸ್ತುತ ಬೆಂಗಳೂರಿನ ಸೌಂದರ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸ್ ಪದವಿ ಕಾಲೇಜಿನಲ್ಲಿ ಕನ್ನಡ ಸಹಾಯಕ ಪ್ರಾಧ್ಯಾಪಕರು.

ಹೆಂಡತಿಗೆ ರಾಹು ಶಾಂತಿ, ಮಕ್ಕಳಿಗೆ ಗುರು ಶಾಂತಿ ಎಂಬೆಲ್ಲಾ ಶಾಂತಿಗಳು ಮುಂದೆ ಸೇರಿಕೊಳ್ಳುತ್ತಿದ್ದವು. ಹಿರೀಮಗ ಕಳ್ಳನಿದ್ದೀಯಲ್ಲೆ ಭವಿಷ್ಯ ಕೇಳಿಸಿಕೊಂಡು, 'ಮೊದಲು ನಿನ್ನ ರಾಶಿಗೆ ಶಾಂತಿ ಇರಬಕು, ಅಂದರ ನಮ್ದೆಲ್ಲ ಮುಂದ ಸರಿ ಆಕ್ಕತಿ' ಅಂತ ಅಪ್ಪನ ಮಾತನ್ನ ಸರಿಪಡಿಸುಂತೆ ಮೈಕೊಡವಿಕೊಂಡು ಏಳುತ್ತಿದ್ದ. ಅಷ್ಟೊತ್ತಿಗೆ ಏಳೂವರೆ ಬಡಿದುಕೊಳ್ಳುತ್ತಿತ್ತು. ಸಣ್ಣ ಮಗ ಪೇಪರ್ ಹಾಕಲೆಂದು ಒಯ್ದ ಸೈಕಲಿನ ಹಾದಿ ಕಾಯುವ ಸಮಯದಲ್ಲಿ ಇಷ್ಟೆಲ್ಲ ಬಡಿವಾರಗಳು. ಬೆಳಗ್ಗೆ ಎರಡರಿಂದ ಮೂರು ಬಾರಿ ಚಹಾದ ಜೊತೆಗೆ ಮೂರ್ಮೂರು ನಮೂನಿಯ ದಿನಭವಿಷ್ಯ ಕೇಳಿಕೊಂಡು ಸೈಕಲ್ ಹತ್ತಿ ಹೊಲ ಸೇರಿ, ಕೊಟ್ಟಿಗೆಯ ಸಗಣಿ ಬಾಚಿ, ಹಾಲು ಕರೆದು ಡೈರಿಗೆ ಹಾಲು ಹಾಕುವುದು ಪ್ರತಿದಿನದ ಕೆಲಸವಾಗಿತ್ತು. ಹೀಗೆ ವಾರವಿಡೀ ಡೈರಿಯಿಂದ ಬಂದ ಹಣದಲ್ಲಿ ಮನೆಯ ವಾರದ ಸಂತಿ ಹಾಗೂ ಸಣ್ಣಪುಟ್ಟ ದಿನಸಿ ಖರೀದಿಯ ಆರ್ಥಿಕ ವಿಚಾರ ನಡೆದುಹೋಗುತ್ತಿತ್ತು. ಉಳಿದಂತೆಲ್ಲಾ ಖರ್ಚುಗಳು ಬಾಕಿ, ಉದ್ರಿ, ಸಾಲ ಎಂಬ ಬೇರೆಬೇರೆ ಹೆಸರುಗಳಿಂದ ಸೊರಗುತಿದ್ದವು.

ನಿಂಗಪ್ಪನ ತಂದೆಗೆ ಹನ್ನೊಂದು ಮಂದಿ ಮಕ್ಕಳು. ಒಬ್ಬೊಬ್ಬರನ್ನು ಒಂದೊಂದು ಸಂಬಂಧಿಕರ ಮನೆಯಲ್ಲಿ ಬೆಳೆಯಲು ಬಿಟ್ಟಿದ್ದ. ಹೀಗಾಗಿ ನಿಂಗಪ್ಪ ತನ್ನ ಮಾವನ ಮನೆಯ ರೈತಾಪಿ ಕುಟುಂಬದಲ್ಲಿ ಬೆಳೆದವನು. ಅಂಥಾ ಕಟ್ಟುಮಸ್ತಲ್ಲದ ನಿಂಗಪ್ಪ ಕುಳ್ಳಕ್ಕಿದ್ದರೂ ದುಡಿತಕ್ಕೆ ಕೊಂಚ ಆಲಸಿಯೇ. ತಾನಾಯಿತು ತನ್ನ ಪಾಡಾಯಿತು ಎಂದಿದ್ದುಕೊಂಡವನು. ನಿಂಗಪ್ಪನನ್ನ ವಯಸ್ಸಿರುವವರೆಗೆ ದುಡಿಸಿಕೊಂಡು ಮದುವೆ ನಂತರದಲ್ಲಿ ಬಿಡಿಗಾಸು ಕೊಡದೆ ಉಟ್ಟಬಟ್ಟೆಯಿಂದ ಮನೆಯಿಂದ ಹೊರಕ್ಕೆ ಹಾಕಿದ್ದರು. ಆಗ ಸಿಕ್ಕಿದ್ದೇ ಊರ ಬ್ರಾಹ್ಮಣ ಮನೆತನದ ಏಳೆಕರೆ ನೀರಾವರಿ ಭೂಮಿ. ದುಡಿತದ ಲಾಭ- ನಷ್ಟಗಳಲ್ಲಿ ಜಮೀನ್ದಾರ ಹಾಗೂ ರೈತ ಸಮಪಾಲನ್ನು ಆರ್ಥಿಕವಾಗಿ ಹಂಚಿಕೊಳ್ಳುವ ಕರಾರಿನ ಮೇಲೆ ಇಪ್ಪತ್ತೈದು ವರ್ಷಗಳಿಂದ ಹೊಲದಲ್ಲಿ ದುಡಿಯುತ್ತಿದ್ದ. ಹೀಗಾಗಿ ಬಂದ ಲಾಭದಲ್ಲಿ ಬೀಜ, ಗೊಬ್ಬರ, ಕೂಲಿ ಖರ್ಚು ಎಂದೇ ಅರ್ಧ ಹಣ ಕೈಸೋರಿ ಹೋಗುತ್ತಿತ್ತು. ಇನ್ನುಳಿದ ಅರ್ಧ ಹಣದಲ್ಲಿ ಹಿಂದಿನ ತಿಂಗಳುಗಳಲ್ಲಿ ಮಾಡಿದ ಸಾಲಸೋಲಗಳನ್ನು ತೀರಿಸುತ್ತಾ ಹೊಸ ಸಾಲಗಳನ್ನು ಮಾಡಿ ಮನೆಗೆ ಬೇಕಾದ ಸಾಮಾನುಗಳನ್ನು ತರುವುದರಲ್ಲೇ ಹೆಣಗಾಡುತ್ತಿದ್ದ ನಿಂಗಪ್ಪ.

ಎಂದಿನಂತೆ ನಿಂಗಪ್ಪ ಸುಮಾರು ಏಳೂವರೆ ಆಸುಪಾಸು ದಿನಭವಿಷ್ಯ ಮುಗಿಸಿ ಸೈಕಲ್ ಹತ್ತಿ ಕೆಂಗಟ್ಟಿಕೆರೆ ಹಾಯ್ದು ಹೊರಟ. ಊರ ಹೊರಗಿನಲ್ಲಿ ಹೊಸದಾಗಿ ಆರಂಭವಾದ ಪೊಲೀಸ್ ಠಾಣೆಯ ಎದುರುಗಡೆಯ ನೀರಾವರಿಯ ಏಳೆಕರೆ ಭೂಮಿಯಲ್ಲಿ ಮೆಕ್ಕೆಜೋಳ ಆಳೆತ್ತರಕ್ಕೆ ಹಸಿರಾಗಿ ಬೆಳೆದು ನಿಂತಿತ್ತು. ಸೈಕಲ್‌ನಿಂದಿಳಿದು, ಕಟ್ಟಿಗೆ ಬೊಂಬುಗಳಿಂದ ನಿರ್ಮಿಸಿದ ಗೇಟ್‌ಬೇಲಿ ತೆಗೆದು ಒಳಕ್ಕೆ ಹೋದ. ಪಂಪಸೆಟ್ ಮನೆಗೋಡೆಗೆ ಅಂಟಿಕೊಂಡು ದನದ ಕೊಟ್ಟಿಗೆ ತೆಂಗಿನಗರಿ ಚಪ್ಪರದಿಂದ ಸೂರು ಕಂಡಿತ್ತು. ದನದ ಕೊಟ್ಟಿಗೆಯ ಬಾಗಿಲು ತೆರೆದುಕೊಂಡು ಬಿದ್ದಿತ್ತು.

